

ಕಷ್ಟವಾಗುತ್ತದೆ. ಆದರೆ, ಸಲೀಸಾಗಿ ಇದೇ ಧಾಟಿಯಲ್ಲಿ ಮಾತನಾಡುವ ಸ್ನೇಹಿತರನ್ನು ನಾನು ನೋಡಿದ್ದೇನೆ. ಹುಡುಗ–ಹುಡುಗಿಯ ಸಂಬಂಧದಂತಹ ವಿಷಯಗಳನ್ನು ಹಸಿಹಸಿಯಾಗಿ ಹೇಳುವುದೀಗ ಟ್ರೆಂಡ್ ಆಗಿದೆ. ನನಗೆ ಜೋಕಿನ ಸುತ್ತ ಲೈಫ್ ಸ್ಟೈಲ್ ಫಿಕ್ಷನ್ ಹೇಳುವ ಸೃಜನಶೀಲತೆ ಇಷ್ಟವಾಗುತ್ತದೆ. ಸುಮುಖಿ ಸುರೇಶ್, ಕೆನ್ನಿ ತರಹದ ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳು ಅದನ್ನು ಮಾಡುತ್ತಿದ್ದಾರೆ. ಒಂದು ವಿಷಯದ ಸುತ್ತ ನಮ್ಮದೇ ಆದ ಕತೆ ಕಟ್ಟುವ ಕ್ರಮ ನನಗೆ ಕುತೂಹಲದ ವಿಷಯ. ಬಲವಂತವಾಗಿ ಸೆಕ್ಸಿಸ್ಟ್ ಪದಗಳನ್ನು ತುರುಕಿ, ಹೇಗೋ ನಗಿಸಬೇಕು ಎಂದು ಹೊರಟರೆ ಗಿಟ್ಟುವುದಿಲ್ಲ. ಅದು ಅಪಸವ್ಯವಾಗಿ ಕಾಣುತ್ತದೆ. ನಾನು ಒಂದು ಹಾಸ್ಯಪ್ರಸಂಗದಲ್ಲಿ ಇರುವೆಗಳು ಜಾಸ್ತಿ ಆಗಿರುವುದನ್ನು ಹೇಳುತ್ತಾ, ಮಗು ಚಡ್ಡಿ ಹಾಕೊಳ್ಳದೇ ಓಡಾಡ್ತಾ ಇದಾನೆ ಎಂದು ಹೇಳಿದ್ದೆ. ಇಂತಹ ತುಂಟತನದ ಮಾತನ್ನು ಜನ ಮುಗ್ಧಭಾವದೊಟ್ಟಿಗೆ ಸ್ವೀಕರಿಸುತ್ತಾರೆ. ಆದರೆ, ಇದನ್ನೇ ಇನ್ನೂ ಕೆಟ್ಟದಾಗಿ ಹೇಳಿಬಿಟ್ಟರೆ ತಿರಸ್ಕರಿಸುತ್ತಾರೆ. ಪಬ್‌ಗಳಲ್ಲಿ ಮಾಡುವ ಸ್ಟ್ಯಾಂಡ್ ಅಪ್‌ಗಳು

ಆ ಕ್ಷಣದಲ್ಲಿ ಗುಟುಕು ನೀಡಿದಂತೆ. ಇವತ್ತು ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಇಂತಹ ಬಿಂದಾಸ್ ಆದ ಮಾತು ಚಾಲ್ತಿಯಲ್ಲಿವೆ. ಇದೇ ಕಾರಣಕ್ಕೆ ಯುವಕರು ಸಹಜವಾಗಿಯೇ ಕನೆಕ್ಟ್ ಆಗುತ್ತಾರೆ. ಏನು ಹೇಳಬೇಕೋ ಅದನ್ನು ಪ್ರಾಸಂಗಿಕವಾಗಿ ಹೇಳದೆ ಬಲವಂತವಾಗಿ ಹೇರಲು ಹೊರಟರೆ ಜನ ನಗುವುದಿಲ್ಲ. ದಾನಿಶ್ ಸೇಠ್ ಮಾಡುವ ಹಾಸ್ಯ ಪ್ರಸಂಗಗಳನ್ನು ನೋಡಿ ನನ್ನ ತಂದೆತಾಯಿ ತಮಗೆ ನಗುವೇ ಬರುವುದಿಲ್ಲ ಎಂದು ಹೇಳುತ್ತಾರೆ. ಆದರೆ, ಅವರ ಹಾಸ್ಯಗಳನ್ನು ಕಂಡು ನಗುವ ಯುವಜನರು ಇದ್ದಾರೆ. ಪ್ರಾಣೇಶ್ ಹಾಗೂ ಕೃಷ್ಣೇಗೌಡರ ಹಾಸ್ಯ ಕಂಡವರಿಗೆ ಇದು ಜೀರ್ಣವಾಗುವುದು ಕಷ್ಟ. ಯಾವುದನ್ನು ಬಿಲೋ ದಿ ಬೆಲ್ಟ್ ಎನ್ನುತ್ತಿದ್ದರೋ ಆ ಪೈಕಿ ಅನೇಕ ಸಂಗತಿಗಳು ಈಗ ಸಮರ್ಥನೆ ಇರುವ ಬಿಲೋ ದಿ ಬೆಲ್ಟ್ ಹಾಸ್ಯ ಎನಿಸತೊಡಗಿವೆ. 'ಫ್ರೆಂಡ್ಸ್', 'ಹೌ ಐ ಮೆಟ್ ಯುವರ್ ಮದರ್' ತರಹದ ಇಂಗ್ಲಿಷ್ ಹಾಸ್ಯ ಸರಣಿಗಳ ಪ್ರಭಾವ ಸಮಕಾಲೀನ ಪರಮ ಪೋಲಿ ಜೋಕುಗಳಲ್ಲಿ ಇದೆ. 'ಫ್ರೆಂಡ್ಸ್' ಸರಣಿಯಲ್ಲಿ ಇಂಥವೇ ಜೋಕುಗಳು ಕ್ಲಿಕ್ ಆಗಿದ್ದು. ಮುಂಬೈ, ದೆಹಲಿ ತರಹದ ನಗರಗಳಲ್ಲಿ ಇಂತಹ ಬಿಡುಬೀಸು ಎನ್ನಬಹುದಾದ ಹಾಸ್ಯವಲ್ಲರಿಯನ್ನು ಕಾಣಬಹುದು. ತಮಿಳಿನಲ್ಲೂ ಕೆಲವು ವೆಬ್ ಸರಣಿಗಳು ಬಂದ ನಂತರ ಫಿಲ್ಟರ್ ಇಲ್ಲದೆ ಜೋಕುಗಳು ಕೇಳಿಸತೊಡಗಿವೆ. ಆದರೆ, ಕನ್ನಡದಲ್ಲಿ ಇಂತಹ ಚಟಾಕಿಗಳನ್ನು ಹಾರಿಸಿದರೆ ಸ್ವೀಕೃತವಾಗುವುದು ಕಷ್ಟ. ನನ್ನ ಅಂಕಲ್ ಸೀರೀಸ್ ಅನ್ನು ವಯಸ್ಸಾದವರೇ ಹೆಚ್ಚಾಗಿ ಇಷ್ಟಪಟ್ಟಿದ್ದರು. ಆದರೆ ಮ್ಯಾನೇಜರ್ ಸೀರೀಸ್ ಬೇರೆ ಬೇರೆ ವಯೋಮಾನದವರಿಗೆ, ಕಾರ್ಪೊರೇಟ್ ಕ್ಷೇತ್ರದಲ್ಲಿ

> ಅಪ್ಪನು ನನ್ನ ಅಮ್ಮನನ್ನು ಮದುವೆಯಾದದ್ದಕ್ಕೆ ನನ್ನ ಅಜ್ಜಿ ಫ್ರೀ ಆಗಿ ಸಿಕ್ಕಳು.
>
> **-ಐಶ್ವರ್ಯಾ ಮೋಹನರಾಜ್**
> **ಸ್ಟ್ಯಾಂಡ್‌ಅಪ್ ಕಾಮಿಡಿಯನ್**



ಜೋಕ್ಸ್' ಎನ್ನುವುದನ್ನು ಖಾಸಗಿಯಾಗಿ ನಾವು ಹೇಳುತ್ತಾ, ಕೇಳುತ್ತಾ, ಬೇರೆ ಯಾರ ಬಳಿಯೂ ಹೇಳಕೂಡದೆಂದು ಎಚ್ಚರಿಸುತ್ತಾ ಬಂದಿದ್ದೇವೆ. ಶಾಲೆ–ಕಾಲೇಜುಗಳಲ್ಲಿ ಡರ್ಟಿ ಜೋಕ್ಸ್ ಯಾರುತಾನೆ ಕೇಳಿರುವುದಿಲ್ಲ? ಯೂರಿನೇಷನ್ ಇತ್ಯಾದಿ ಕುರಿತು ಚಿಕ್ಕಪ್ರಾಯದಲ್ಲಿ ತಮಾಷೆ ಮಾಡಿರುತ್ತೇವೆ. ವಯಸ್ಸಾಗುತ್ತಾ ಹೋದಂತೆ ಸೆಕ್ಸ್ ಕುರಿತು ಮಾತುಕತೆ ಶುರುವಾಗುತ್ತದೆ. ಇಂತಹ ಮಾತುಕತೆ 'ಕಿಕ್' ಕೊಡುತ್ತದೆ. ಸ್ಟ್ಯಾಂಡ್‌ಅಪ್ ಕಾಮಿಡಿ ಕೂಡ ಹೊಸತೇನನ್ನೋ ಆಲೋಚನೆಗೆ ಹಚ್ಚುವಂತಿರಬೇಕು ಎಂಬ ಉಮೇದಿನಿಂದಲೇ ಈ ರೀತಿಯ ಕಂಟೆಂಟ್ ಅನ್ನು ಅವಲಂಬಿಸುತ್ತದೆ. 'ಡಿಮ್ಯಾಂಡ್ ಅಂಡ್ ಸಪ್ಲೈ' ತತ್ವ ಇಲ್ಲೂ ಅನ್ವಯವಾಗುತ್ತದೆ. ಒಂದು ಕಂತನ್ನು ಮುಗಿಸಿದೊಡನೆ ಮುಂದಿನ ಕಂತಿನಲ್ಲಿ ಎಂತಹ ಹಾಸ್ಯ ಮೂಡಬಹುದು ಎಂಬ ಕುತೂಹಲವನ್ನೂ ಸ್ಟ್ಯಾಂಡ್‌ಅಪ್ ಕಾಮಿಡಿಯನ್‌ಗಳು ಉಳಿಸಬೇಕು. ಅಂತಹ ಜರೂರೇ ಚಕಿತಗೊಳಿಸುವ ಸರಕನ್ನು ಒದಗಿಸಲು ಪ್ರೇರಣೆ ನೀಡುತ್ತದೆ.

ಸ್ಟ್ಯಾಂಡ್ ಅಪ್ ಕಾಮಿಡಿಯನ್ನು ನೋಡುವವರು ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರು. ಮೆಟ್ರೊ ನಗರ ನಿವಾಸಿಗಳು. ಬೆಂಗಳೂರು, ದೆಹಲಿ, ಮುಂಬೈ ಇಂತಹ ನಗರಗಳಲ್ಲಿ ಹೆಚ್ಚು. ಇಪ್ಪತ್ತೈದರಿಂದ ನಲವತ್ತು ವರ್ಷ ವಯೋಮಾನದವರೇ ಜಾಸ್ತಿ. ಟಿ.ವಿ ವಾಹಿನಿಗಳೂ ಟಿಆರ್‌ಪಿ ಹೆಚ್ಚಿಸಿಕೊಳ್ಳುವುದಕ್ಕಾಗಿ ಈ ರೀತಿ ಚಕಿತಗೊಳಿಸುವ ಕಾರ್ಯಕ್ರಮಗಳ ಕುರಿತು ಯೋಚಿಸುತ್ತಿರುತ್ತವೆ. ಸೆನ್ಸಾರ್ ಇರುವುದಿಲ್ಲ. ಜನರನ್ನು ಹಿಡಿದಿಡುವುದು ಹೇಗೆ ಎಂಬ ಲೆಕ್ಕಾಚಾರದಲ್ಲಿ ಈ ರೀತಿಯ ವಸ್ತುವಿಷಯಗಳು ಗಮನಸೆಳೆಯುತ್ತವೆ.

ಹಿಂದೆ ರಾತ್ರಿ ಏಳರಿಂದ ಎಂಟು ಗಂಟೆಯವರೆಗೆ ಮನೆಮಂದಿ ಒಟ್ಟಿಗೆ ಕುಳಿತು ಟಿ.ವಿ. ಧಾರಾವಾಹಿಗಳನ್ನು ನೋಡುತ್ತಿದ್ದರು. ಮುಜುಗರ ಎನಿಸುವಂತಹದ್ದೇನಾದರೂ ಪ್ರಸಾರವಾದರೆ ಚಾನೆಲ್ ಬದಲಿಸುತ್ತಿದ್ದರು. ಈಗ ಕೋಣೆಗಳಿವೆ. ಕೈಲಿ ಮೊಬೈಲ್ ಇದೆ. ಮನಸೋಇಚ್ಛೆ ಕಾರ್ಯಕ್ರಮಗಳನ್ನು ನೋಡಲು ಬೇಕಾದ ಖಾಸಗಿ ಸ್ಥಳ ಸಿಗುತ್ತಿದೆ. ಇವನ್ನೆಲ್ಲ ಆಧರಿಸಿಯೇ ವಿಶುಯಲ್ ವೆಬ್‌ಸೈಟ್‌ಗಳಲ್ಲಿ ಕಂಟೆಂಟ್‌ಗಳು ತಯಾರಾಗುತ್ತಿವೆ.

ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುವ ಹೆಣ್ಣುಮಕ್ಕಳನ್ನೂ ನಾನು ಗಮನಿಸಿದ್ದೇನೆ. ಸೆಕ್ಸಿಸ್ಟ್ ರೀತಿಯಲ್ಲಿ ಮಾತಾಡಿಬಿಟ್ಟರೆ ಅದೇ ಫೆಮಿನಿಸಂ ಎಂದು ಕೆಲವರು ನಂಬಿದಂತೆ ವರ್ತಿಸುತ್ತಾರೆ. ಫೆಮಿನಿಸ್ಟ್ ಆಗುವುದಕ್ಕೂ ಸೂಡೊ ಫೆಮಿನಿಸ್ಟ್ ಆಗುವುದಕ್ಕೂ ನಡುವೆ ತೆಳುವಾದ ಗೆರೆ ಇದೆ. ಇನ್ನು ಕೆಲವರು ತಮ್ಮ ದೌರ್ಬಲ್ಯಗಳು ತಂದೊಟ್ಟುವ ಮನೋಬೇನೆಯನ್ನು ನೀಗಿಕೊಳ್ಳಲೆಂದೇ ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುವುದುಂಟು. 'ಫೋರ್ ಮೋರ್ ಶಾಟ್ಸ್' ಎಂಬ ಸರಣಿ ಅಮೆಜಾನ್‌ನಲ್ಲಿ ಪ್ರಸಾರವಾಗುತ್ತದೆ. ನಾಲ್ವರು ಸಾಧಕಿಯರ ಕತೆಯನ್ನು ಅದು ಒಳಗೊಂಡಿದೆ. ಅದರಲ್ಲಿ ಒಬ್ಬಳು ಸ್ಥೂಲಕಾಯದವಳು. ಅವಳು ಸ್ಟ್ಯಾಂಡ್‌ಅಪ್ ಕಾಮಿಡಿಯನ್. ಮನೆಯಲ್ಲಿ, ಹೊರಗೆ ದಪ್ಪ ಇರುವುದನ್ನು ವ್ಯಂಗ್ಯ ಮಾಡುತ್ತಿರುತ್ತಾರೆ. ಅದನ್ನೇ ಅವಳು ಸ್ಟ್ಯಾಂಡ್‌ಅಪ್ ಕಾಮಿಡಿಯಲ್ಲಿ ಹೊರಹಾಕುತ್ತಿರುತ್ತಾಳೆ. ಹಾಗೆಂದು ಅವಳು ಜೋಕ್ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನಲಾಗದು. ಅದನ್ನೂ ಮೀರಿ ಅವಳ ಪಾತ್ರ ಗಟ್ಟಿಯಾಗುವುದರಲ್ಲಿ ಸಬಲೀಕರಣ ಇರುತ್ತದೆ. ಮಹಿಳಾ ಸಬಲೀಕರಣಕ್ಕೆ ಅನೇಕ ಉತ್ತಮ ದಾರಿಗಳಿರುತ್ತವೆ. ಬರೀ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಆಗಿ ಬೋಲ್ಡ್ ಜೋಕ್‌ಗಳನ್ನು ಸಿಡಿಸುವುದರಲ್ಲಿ ಅಲ್ಲ ಎಂಬ ಪ್ರತಿವಾದವೂ ಇದೆ. ಇದೂ ಗಮನಿಸಬೇಕಾದ ಸಂಗತಿ. ■